ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ ಅರಸೀಕೆರೆ.

ಸಿ.ಸಿ.ನಂ. 897/2020

ಪಿರ್ಯಾದಿದಾರರು ಃ ಬಾಣಾವರ ಪೋಲೀಸ್ ಠಾಣೆ

ಃವಿರುದ್ಧಃ

ಆರೋಪಿತರು ಃ 1. ಆಗಸ್ಟೀನ್ ಜೈಕುಮಾರ ಬಿನ್ ಪದ್ಮರಾಜ್,
55 ವರ್ಷ ವಯಸ್ಸು,
ಇನೋವಾ ಕಾರ್ ನಂಃ ಕೆಎ-01-ಎಂಇ-2142 ರ ಚಾಲಕ
ಡೋರ್ ನಂಃ 205,
ಬೆಥಲ್ ಹೋಮ್,
ಪ್ರಿಯಾಂಕ ಲೇಔಟ್,
ರಾಯಸಂದ್ರ, ಹುಸ್ಕೂರು ಅಂಚೆ,
ಬೆಂಗಳೂರು ನಗರ .

ಆರೋಪಣೆ

ದಿನಾಂಕ 05.09.2020 ರಂದು ಮಧ್ಯಾಹ್ನ 2-30 ಗಂಟೆ ಸಮಯದಲ್ಲಿ ಬಾಣಾವರ ಪೊಲೀಸ್ ಠಾಣಾ ಸರಹದ್ದಿನ ಚಿಕ್ಕಾರಹಳ್ಳಿ ಗೇಟ್ ಬಳಿ ಎನ್.ಹೆಚ್. 206 ರಸ್ತೆಯಲ್ಲಿ ಪಿರ್ಯಾದುದಾರರ ಮಗ ಭೂಮೇಶನು ಚಾಸಾ-3 ಗೀತಮ್ಮ ರವರ ಬಳಿಗೆ ಹೋಗಲು ರಸ್ತೆಯನ್ನು ದಾಟುತ್ತಿದ್ದಾಗ 1 ನೇ ಆರೋಪಿಯಾದ ನೀವು ಕಡೂರು ಕಡೆಯಿಂದ ನಿಮ್ಮ ಬಾಬ್ತು ಕೆಎ-01-ಎಂಇ-2142 ರ ಇನ್ನೋವಾ ಕಾರನ್ನು ಸಾರ್ವಜನಿಕ ರಸ್ತೆಯಲ್ಲಿ ಮಾನವನ ಪ್ರಾಣಕ್ಕೆ ಹಾನಿ ಉಂಟು ಮಾಡುವ ರೀತಿಯಲ್ಲಿ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯತನದಿಂದ ಓಡಿಸಿಕೊಂಡು ಬಂದು ಭೂಮೇಶನಿಗೆ ಡಿಕ್ಕಿ ಮಾಡಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ 1 ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ನಿಮ್ಮ ಬಾಬ್ತು ಕೆಎ-01-ಎಂಇ-2142 ರ ಇನ್ನೋವಾ ಕಾರನ್ನು ಸಾರ್ವಜನಿಕ ರಸ್ತೆಯಲ್ಲಿ ಮಾನವನ ಪ್ರಾಣಕ್ಕೆ ಹಾನಿ ಉಂಟು ಮಾಡುವ ರೀತಿಯಲ್ಲಿ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯತನದಿಂದ ಓಡಿಸಿಕೊಂಡು ಬಂದು ಭೂಮೇಶನಿಗೆ ಡಿಕ್ಕಿ ಮಾಡಿದ್ದು, ಅದೇ ಸಮಯಕ್ಕೆ 2 ನೇ ಆರೋಪಿಯು ಬಾಣಾವಾರ ಕಡೆಯಿಂದ ಶಿವಮೊಗ್ಗ ಕಡೆಗೆ ಬಸ್ ನ್ನು ಸಾರ್ವಜನಿಕ ರಸ್ತೆಯಲ್ಲಿ ಮಾನವನ ಪ್ರಾಣಕ್ಕೆ ಹಾನಿ ಉಂಟು ಮಾಡುವ ರೀತಿಯಲ್ಲಿ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯತನದಿಂದ ಓಡಿಸಿಕೊಂಡು ಬಂದು 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಸಂಬಂಧ ರಸ್ತೆಯ ಬಲಭಾಗಕ್ಕೆ ಬಿದ್ದಿದ್ದ ಭೂಮೇಶರವರ ಮೇಲೆ ಹತ್ತಿಸಿ ಅಪಘಾತಪಡಿಸಿದ ಪರಿಣಾಮ ಸದರಿ ಭೂಮೇಶ ಬಿನ್ ಲೋಕೇಶ, 10 ವರ್ಷ, ಮತ್ತಿಘಟ್ಟ ಗ್ರಾಮ, ಕಡೂರು ತಾಲ್ಲೂಕು ಇವರಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಆದ್ದರಿಂದ 1 ನೇ ಆರೋಪಿಯಾದ ಭಾರತ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ವಿಮೆ ಹೊಂದಿರದ ಕೆಎ-01-ಎಂಇ-2142 ರ ಇನ್ನೋವಾ ಕಾರ್ ನ್ನು ಚಾಲನೆ ಮಾಡಿರುತ್ತೀರಿ, ಆದ್ದರಿಂದ 1 ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದಂತಹ ಆಪಾದನೆಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗ ತಕ್ಕದ್ದು ಅಂಥ ಈ ಮೂಲಕ ಆದೇಶ ಮಾಡಿರುತ್ತೇನೆ.

ಪ್ರಶ್ನೆಃ- ಈಗ ಓದಿ ಹೇಳಿದ ಆಪಾದನೆ ಅರ್ಥ ಮಾಡಿಕೊಂಡಿರುತ್ತೀರಾ?
ಉತ್ತರಃ-
ಪ್ರಶ್ನೆಃ- ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ-

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಡೀಕರಿಸುತ್ತೇನೆ.)

ದಿನಾಂಕಃ 30.08.2023.
ಸ್ಥಳಃ ಅರಸೀಕೆರೆ.

(ಅಮರನಾಥ ಬಿ.ಎನ್)
ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ಅರಸೀಕೆರೆ.